**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:9**

**ಎಸ್.ಸಿ. ಸಂಖ್ಯೆ: 10/2019 ಸಿಡಬ್ಲ್ಯೂ:5**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಸತೀಶ ನಾಯಕ್ |
| **ತಂದೆ ಹೆಸರು** | : | ರಂಗು ನಾಯಕ್ |
| **ವಯಸ್ಸು** | : | 40 ವರ್ಷ |
| **ವೃತ್ತಿ** | : | ಕ್ಯಾಟರಿಂಗ್ ಕೆಲಸ |
| **ವಾಸ** | : | ಬೆಂಗಳೂರು |

**ದಿನಾಂಕ: 17-09-2021 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ಕಳೆದ 20 ವರ್ಷಗಳಿಂದ ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಗೌತಮ ಚಂದ್ (ಚಾಸಾ-6) ಈತನ ಪರಿಚಯ ಇದೆ. ನಾನು ಅವರಿಗೆ ಸಂಬಂಧಿಸಿದ ಬೆಂಗಳೂರಿನ ಶ್ರೀನಗರದ ಜ್ಯುವೆಲರಿ ಶಾಪ್‌ಗೆ ಹೋಗುತ್ತೇನೆ. ಆರೋಪಿಯನ್ನು ನೋಡಿದ್ದೇನೆ. ಅವನು ನನ್ನ ದೂರದ ಸಂಬಂಧಿ ಇರುತ್ತಾನೆ. ಆರೋಪಿ ಬೆಂಗಳೂರಿಗೆ ಬಂದಾಗ ನನ್ನನ್ನು ಭೇಟಿಯಾಗುತ್ತಿದ್ದನು.

ನನಗೆ ಹಣ ಬೇಕಾಗಿದ್ದರಿಂದ ನನ್ನ ಹೆಂಡತಿಯ ಚಿನ್ನವನ್ನು ಅಡಮಾಡುವುದಕ್ಕಾಗಿ 2019 ರ ಮಾರ್ಚ್ ತಿಂಗಳಲ್ಲಿ ಆರೋಪಿಯೊಂದಿಗೆ ಸೇರಿ ಗೌತಮ ಚಂದ್ (ಚಾಸಾ-6) ಇವರಿಗೆ ಸಂಬಂಧಿಸಿದ ಜ್ಯುವೆಲರಿ ಶಾಪ್‌ಗೆ ಹೋಗಿದ್ದೆವು. ಗೌತಮ ಚಂದ್ ಈತನಿಗೆ ನಾನು ಆ ಚಿನ್ನ ನನ್ನ ಹೆಂಡತಿಗೆ ಸಂಬಂಧಪಟ್ಟಿದ್ದು ಇದೆ ಎಂದು ತಿಳಿಸಿ ರೂ.20,000/- ಕೊಡುವಂತೆ ಕೇಳಿದಾಗ ಅವನು ರೂ.18,000/- ಕೊಟ್ಟಿರುತ್ತಾನೆ. ಚಿನ್ನ ಅಡ ಇಟ್ಟ ಒಂದು ವಾರದಲ್ಲಿ ಪೊಲೀಸರು ಫೋನ್ ಮಾಡಿ ಗೌತಮ ಚಂದ್ ಈತನ ಅಂಗಡಿಯ ಹತ್ತಿರ ಬರುವಂತೆ ತಿಳಿಸಿದ್ದು ನಾನು ಅಂಗಡಿ ಹತ್ತಿರ ಹೋದಾಗ ಅಲ್ಲಿ ಪೊಲೀಸರೊಂದಿಗೆ ಆರೋಪಿಯೂ ಇದ್ದನು. ಆರೋಪಿಯೊಂದಿಗೆ ಬಂದು ನೀನು ಚಿನ್ನವನ್ನು ಅಡ

ಮಾಡಿದ್ದೀಯ ಎಂದು ಪೊಲೀಸರು ಕೇಳಿದಾಗ ಅದು ನನ್ನ ಹೆಂಡತಿಯ ಚಿನ್ನ ಅಡ ಮಾಡಿದ್ದೇನೆ ಎಂದು ಹೇಳಿರುತ್ತೇನೆ. ಆ ಚಿನ್ನವನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಈಗ ನೋಡಿದ ನಿಪಿ-12 ರ ಮಹಜರಿನಲ್ಲಿರುವ ಸಹಿ ನನ್ನದು ಇದೆ. ಈ ಸಹಿಯನ್ನು ಎಲ್ಲಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಮಹಜರಿನಲ್ಲಿರುವ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು. ಈಗ ನೋಡಿದ ಮಹಜರಿನಲ್ಲಿರುವ ಸಹಿ ನನ್ನದು ಇದೆ. ಈ ಸಹಿಯನ್ನು ಎಲ್ಲಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಮಹಜರನ್ನು ನಿಪಿ-13 ಎಂದು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ನಿಪಿ-12, 13 ರ ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈಗ ನೋಡಿದ ರಶೀದಿ (ನಿಪಿ-10) ಇದನ್ನು ಚಿನ್ನ ಅಡ ಇಟ್ಟಾಗ ಚಿನ್ನದ ಅಂಗಡಿಯವರು ಕೊಟ್ಟಿದ್ದು ಇದೆ. ಪೊಲೀಸರು ಕುಂದಾಪುರಕ್ಕೆ ಕರೆದುಕೊಂಡು ಬಂದಾಗ ಮೇಲಿನ ವಿಷಯವನ್ನು ತಿಳಿಸಿದ್ದೇನೆ.

ಪೊಲೀಸರು ನ್ಯಾಯಾಲಯದಲ್ಲಿ ಹೇಳಿಕೆ ನೀಡುವಂತೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನಾನು ನ್ಯಾಯಾಲಯದಲ್ಲಿರುವ ಆರೋಪಿ ಊರಲ್ಲಿ ಕೊಲೆ ಮಾಡಿ ನನ್ನ ಹತ್ತಿರ ಬಂದಿದ್ದು ಅವನು ತಂದಿದ್ದ ಚಿನ್ನವನ್ನು ಅಡ ಇಡಿಸಿ ಹಣ ಕೊಡಿಸುವಂತೆ ಕೇಳಿದ್ದನು ಎಂದು ಹೇಳುವಂತೆ ಪೊಲೀಸರು ಹೇಳಿದ್ದನ್ನು ನ್ಯಾಯಲಯದಲ್ಲಿ ಹೇಳಿದ್ದೇನೆ. ಈಗ ನೋಡಿದ ಮು.ಮಾ-1 ಮತ್ತು ಮು.ಮಾ-2 ರ ಚಿನ್ನ ನನ್ನದು ಇದೆ.

**(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

ಎಸ್.ಸಿ. ಸಂಖ್ಯೆ: 10/2019
ಪಿಡಬ್ಲ್ಯೂ:9
ಸಿಡಬ್ಲ್ಯೂ:5

<u>ಪಾಟೀ ಸವಾಲು:</u> ಸರ್ಕಾರಿ ಅಭಿಯೋಜಕರಿಂದ

ನನ್ನ ಮದುವೆಯಾಗಿ 8 ವರ್ಷ ಆಗಿದೆ. 2019 ರಲ್ಲಿ ನನ್ನ ಹೆಂಡತಿ ಹತ್ತಿರ ಸುಮಾರು 20 ಗ್ರಾಂ ಚಿನ್ನ ಇತ್ತು. ಈ ಚಿನ್ನದಲ್ಲಿ ಚೈನ್, ಬ್ರಾಸ್‌ಲೆಟ್, ಉಂಗುರ ಇರುತ್ತವೆ. ಮು.ಮಾ-1 ಮತ್ತು ಮು.ಮಾ-2 ರ ಚಿನ್ನವನ್ನು ಪೊಲೀಸರು ವಶಪಡಿಸಿಕೊಂಡು ಎರಡೂವರೆ ವರ್ಷ ಆಗಿದೆ ಎನ್ನುವುದು ನಿಜ. ಇಲ್ಲಿಯವರೆಗೂ ನಾನು ಈ ಚಿನ್ನವನ್ನು ಬಿಡಿಸಿಕೊಂಡು ಹೋಗಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿಲ್ಲ. ಮು.ಮಾ-1 ಮತ್ತು ಮು.ಮಾ-2 ರ ಚಿನ್ನ ಮದುವೆಯಾಗುವ ಮೊದಲು ನನ್ನ ಹೆಂಡತಿಯ ಹತ್ತಿರ ಇತ್ತು. ಈ ಚಿನ್ನ ನನ್ನ ಹೆಂಡತಿಯದ್ದು ಎಂದು ಹೇಳಲು ಯಾವುದೇ ದಾಖಲೆ ಇಲ್ಲ. ಪೊಲೀಸರ ಭಯದಿಂದ ಚಿನ್ನ ಬಿಡಿಸಿಕೊಳ್ಳಲು ಅರ್ಜಿ ಸಲ್ಲಿಸಿಲ್ಲ.

ಗುಲಾಬಿ ಎನ್ನುವವರನ್ನು ಕೊಲೆ ಮಾಡಿ ಆರೋಪಿ ಚಿನ್ನವನ್ನು ತೆಗೆದುಕೊಂಡು ಹೋಗಿದ್ದಾನೆ ಎಂದು ಕೇಸ್ ಆಗಿರುವುದು ನನಗೆ ಗೊತ್ತಾಯಿತು. ಮಾರ್ಚ 2019 ರಲ್ಲಿ ಪೊಲೀಸರು ಈ ಚಿನ್ನವನ್ನು ತೆಗೆದುಕೊಂಡು ಹೋಗಲು ಬಂದಾಗ ಆರೋಪಿ ಮರ್ಡರ್ ಕೇಸ್‌ನಲ್ಲಿ ಚಿನ್ನವನ್ನು ಸುಲಿಗೆ ಮಾಡಿ ತಂದಿದ್ದಾನೆ ಎನ್ನುವ ಕುರಿತು ನನಗೆ ತಿಳಿದು ಬಂದಿರುತ್ತದೆ ಎನ್ನುವುದು ನಿಜ. ನಾನು ಗೌತಮ ಚಂದ್ ಇವರಲ್ಲಿ ಅಡ ಇಟ್ಟಿದ್ದ ಚಿನ್ನವನ್ನು ಪೊಲೀಸರು ತೆಗೆದುಕೊಂಡು ಹೋದ ಬಗ್ಗೆ ಗೌತಮ ಚಂದ್ ಈತನ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಪೊಲೀಸರು ನಾನು ಅಡ ಇಟ್ಟಿದ್ದ ಚಿನ್ನವನ್ನು ತೆಗೆದುಕೊಂಡು ಹೋದ ಬಗ್ಗೆ ಅವರ ಮೇಲಾಧಿಕಾರಿಗಳಿಗೆ ದೂರು ಕೊಟ್ಟಿರುವುದಿಲ್ಲ. ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ಆ ಸಮಯದಲ್ಲಿ ನ್ಯಾಯಾಲಯದಲ್ಲಿ ಕೇವಲ 3 ಜನ ಮಾತ್ರ ಇದ್ದರು. ಹೇಳಿಕೆ ನೀಡುವ ಸಮಯದಲ್ಲಿ ಬೇರೆ ಯಾರಿಂದಲಾದರೂ ಹೇಳಿಕೆ ನೀಡಲು ಒತ್ತಡ ಇದೆಯೇ ಎಂದು ನ್ಯಾಯಾಧೀಶರು ವಿಚಾರಿಸಿರುವುದಿಲ್ಲ. ಹೇಳಿಕೆ ದಾಖಲಿಸಿಕೊಳ್ಳುವಾಗ ಸ್ವಇಚ್ಛೆಯಿಂದ ಹೇಳುತ್ತಿದ್ದೀರಾ ಎಂದು ನ್ಯಾಯಾಧೀಶರು ನನ್ನನ್ನು ಕೇಳಿದ್ದಾರೆ ಎನ್ನುವುದು ನಿಜ. ನಾನು ಪೊಲೀಸರ ಒತ್ತಡದಿಂದ ಹೇಳಿಕೆ ನೀಡುತ್ತಿದ್ದೇನೆ ಎಂದು ಆ ದಿನ ನ್ಯಾಯಾಧೀಶರಿಗೆ ತಿಳಿಸಿಲ್ಲ. ಈಗ

ಓದಿ ಹೇಳಿದ ಹೇಳಿಕೆಯ ರೀತಿಯಲ್ಲಿ ನಾನು ಆ ದಿನ ನ್ಯಾಯಾಧೀಶರ ಮುಂದೆ ಹೇಳಿದ್ದೇನೆ ಎನ್ನುವುದು ನಿಜ. ನನ್ನ ಹೇಳಿಕೆಯನ್ನು ನ್ಯಾಯಾಧೀಶರು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಂಡಿಲ್ಲ ಅದನ್ನು ಗೌಪ್ಯ ನ್ಯಾಯಾಲಯದಲ್ಲಿ ದಾಖಲಿಸಿಕೊಂಡಿದ್ದಾರೆ ಎನ್ನುವುದು ಸರಿ ಅಲ್ಲ. ಈಗ ನೋಡಿದ ಹೇಳಿಕೆಯಲ್ಲಿರುವ ಸಹಿ ನನ್ನದು ಇದೆ. ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆಗೆ ವಿರುದ್ಧವಾಗಿ ಈ ದಿನ ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯನ್ನು ಹೇಳಿದ್ದೇನೆ ಎನ್ನುವುದು ನಿಜ. ಸಾಕ್ಷಿಯು ಮುಂದುವರಿದು ಆ ದಿನ ಪೊಲೀಸರ ಒತ್ತಡದ ಮೇರೆಗೆ ನಾನು ಹೇಳಿಕೆ ನೀಡಿದ್ದೇನೆ.

ಚಿನ್ನ ಅಡ ಇಡುವ ದಿನ ಬೆಳಿಗ್ಗೆ 8 ರಿಂದ 10 ಗಂಟೆಯ ಸಮಯದಲ್ಲಿ ಆರೋಪಿ ನನ್ನ ಮನೆಗೆ ಬಂದಿದ್ದನು. ಅಲ್ಲಿ ಅರ್ಧ ಗಂಟೆಯವರೆಗೆ ಇದ್ದನು. ಅವನು ಅ ದಿನ ಕಾರಿನಲ್ಲಿ ಬಂದಿದ್ದನು. ಅದೇ ಕಾರಿನಲ್ಲಿ ಚಿನ್ನದ ಅಂಗಡಿಗೆ ಹೋಗಿರುತ್ತೇವೆ. ನಾವಿಬ್ಬರೇ ಹೋಗಿರುತ್ತೇವೆ. ನಾನು ಅಂಗಡಿಯಲ್ಲಿ ಸುಮಾರು 20 ನಿಮಿಷದವರೆಗೆ ಇದ್ದೆನು. ಆರೋಪಿ ನನ್ನ ಸ್ನೇಹಿತ ಎಂದು ಅಂಗಡಿಯವರಿಗೆ ತಿಳಿಸಿದ್ದೇನೆ. ವ್ಯವಹಾರದ ನಂತರ ಆರೋಪಿ ಬೇರೆ ಹೋಗಿದ್ದಾನೆ ನಾನು ಬೇರೆ ಹೋಗಿದ್ದೇನೆ.

<u>ವಿಚಾರಣೆಯನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.</u>

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.**
**ಕುಂದಾಪುರ**

<u>ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.</u>

ಆ ದಿನ ಆರೋಪಿ ಮತ್ತು ನಾನು ಬೇರೆ ಬೇರೆ ಹೋದ ನಂತರ ಮತ್ತೆ ಆರೋಪಿಯನ್ನು ನೋಡಿದ್ದು ಬೆಂಗಳೂರಿಗೆ ಬಂದಾಗ. ಮು.ಮಾ-1 ಮತ್ತು ಮು.ಮಾ-2 ರ ರೀತಿಯ ಆಭರಣ ವಯಸ್ಸಾದವರು ಹಾಕುವಂತಹದ್ದಾಗಿದೆ ಎಂದರೆ ಇರಬಹುದು. ನಾನು

**ಎಸ್.ಸಿ. ಸಂಖ್ಯೆ: 10/2019**
**ಪಿಡಬ್ಲ್ಯೂ:9**
**ಸಿಡಬ್ಲ್ಯೂ:5**

ಪೊಲೀಸರ ಮುಂದೆ ಹೇಳಿಕೆ ನೀಡುವಾಗ ಆರೋಪಿ ನನ್ನ ರೂಮ್‌ಗೆ ಬಂದು ತನಗೆ ಸ್ವಲ್ಪ ಹಣ ಬೇಕು ಎಂದು ಕೇಳಿದ್ದು ನಾನು ನನ್ನ ಹತ್ತಿರ ಹಣ ಇಲ್ಲ ಎಂದು ಹೇಳಿದಾಗ ತನ್ನ ಹೆಂಡತಿಯ ಉಂಗುರ ಮತ್ತು ಕಿವಿ ಓಲೆ ತಂದಿದ್ದೇನೆ ಅದನ್ನು ಬ್ಯಾಂಕ್‌ನಲ್ಲಿ ಅಡವಿರಿಸಿ ರೂ.20,000/- ಹಣ ಕೊಡಿಸುವಂತೆ ಕೇಳಿದ ಆಗ ನಾನು ಬ್ಯಾಂಕ್‌ನವರ ಪರಿಚಯ ಇಲ್ಲ ನಾನು ಮೊದಲು ಕೆಲಸ ಮಾಡಿದ ಸ್ಥಳದಲ್ಲಿ ಶೇಟ್ ಒಬ್ಬರ ಪರಿಚಯ ಇದೆ ಎಂದು ಹೇಳಿದಾಗ ಅವರಿಂದ ಹಣ ತೆಗೆಸಿಕೊಡುವಂತೆ ಕೇಳಿದ ಎಂದು ಹೇಳಿದ್ದೇನೆ ಎನ್ನುವುದು ಸರಿ ಅಲ್ಲ. ಅದೇ ರೀತಿ ನಾನು ಆರೋಪಿಯನ್ನು ಶ್ರೀನಗರದಲ್ಲಿರುವ ಮಹಾರಾಜ ಜ್ಯುವೆಲರ್ಸ್‌ಗೆ ಹೋಗಿ ಅಂಗಡಿ ಮಾಲೀಕರಿಗೆ ಆರೋಪಿ ತಂದಿದ್ದ ಚಿನ್ನದ ಓಲೆ ಮತ್ತು ಉಂಗುರವನ್ನು ತೂಕ ಮಾಡಿಸಿದ್ದು ಅದು 9 ಗ್ರಾಂ ಇದ್ದು ನಂತರ ಶೇಟ್ ನನಗೆ ಪರಿಚಯದವನು ಇದ್ದುದರಿಂದ ನನ್ನ ಹೆಸರಿನಲ್ಲಿ ರಶೀದಿ ಮಾಡಿ ರೂ.18,000/- ಗಳನ್ನು ನೀಡಿದರು ಎಂದು ಹೇಳಿದ್ದೇನೆ ಎನ್ನುವುದು ಸರಿ ಅಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-14 ಮತ್ತು ಹೇಳಿಕೆಯ ಭಾಗವನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ದಿನಾಂಕ 13-09-2019 ರಂದು ಪೊಲೀಸರು ನನ್ನನ್ನು ಮಹಾರಾಜ ಜ್ಯುವೆಲರ್ಸ್ ಹತ್ತಿರ ಬರಲು ಹೇಳಿದ್ದು ಅಲ್ಲಿ ಪೊಲೀಸರೊಂದಿಗೆ ಆರೋಪಿಯೂ ಇದ್ದು ನನ್ನ ಸಮಕ್ಷಮ ಚಿನ್ನಾಭರಣಗಳನ್ನು ಮಹಜರು ಮೂಲಕ ಸ್ವಾಧೀನಪಡಿಸಿಕೊಂಡು ಮಹಜರು ಮಾಡಿ ನನ್ನ ಸಹಿ ಪಡೆದುಕೊಂಡರು ಎನ್ನುವುದು ನಿಜ. ದಿನಾಂಕ 19-03-2019 ರಂದು ಪೊಲೀಸರ ಮುಂದೆ ನಾನು ಮಹಾರಾಜ ಜ್ಯುವೆಲರ್ಸ್‌ನವರು ನೀಡಿದ್ದ ರಶೀದಿಯನ್ನು ಹಾಜರುಪಡಿಸಿದ್ದೇನೆ ಎಂದು ಹೇಳುವುದು ಸರಿ ಅಲ್ಲ. ಆ ಸಮಯದಲ್ಲಿ ಮಹಜರಿಗೆ ನಾನು ಸಹಿ ಮಾಡಿದ್ದೇನೆ ಎಂದರೆ ಅದು ನನಗೆ ನೆನಪಿಲ್ಲ. ಮು.ಮಾ-1 ಮತ್ತು 2 ಇದು ಈ ಪ್ರಕರಣದ ಮೃತ ಗುಲಾಬಿ ಇವರಿಗೆ ಸೇರಿದ್ದು ನನಗೆ ಸೇರಿಲ್ಲ ಎಂದು ಹೇಳುವುದು ಸರಿ ಅಲ್ಲ. ಇದೇ ಕಾರಣದಿಂದಾಗಿ ನಾನು ಇಲ್ಲಿಯವರೆಗೂ ಅದನ್ನು ಮರಳಿ ಪಡೆದುಕೊಳ್ಳಲು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎನ್ನುವುದು ಸರಿ ಅಲ್ಲ. ಆರೋಪಿ ನನ್ನ ಸಂಬಂಧಿಕ ಹಾಗೂ ಪರಿಚಯದವನು ಇರುವುದರಿಂದ ಅವನಿಗೆ ಸಹಾಯ ಮಾಡುವುದಕ್ಕಾಗಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ಇದೇ ಕಾರಣಕ್ಕಾಗಿ ಪೊಲೀಸರು ನನ್ನ ಮೇಲೆ ಒತ್ತಡ ಹಾಕಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ಈಗ ನೋಡಿದ ಹೇಳಿಕೆಯನ್ನು ನಾನು ನ್ಯಾಯಾಧೀಶರ ಮುಂದೆ ನೀಡಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ-15 ಎಂದು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:</u> ಆರೋಪಿ ಪರ ಶ್ರೀ ಎಂ.ಎಸ್.ಎಸ್. ವಕೀಲರಿಂದ**

ಪೊಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನಿಂದ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದು ಸೂಚಿಸುವುದು ನಿಜ. ನಾನು ಕ್ಯಾಟರಿಂಗ್ ಕೆಲಸವನ್ನು ನಿರ್ವಹಿಸುತ್ತೇನೆ. ಮನೆಯನ್ನು ಲೀಸ್‌ಗೆ ಪಡೆಯುವುದಕ್ಕಾಗಿ ಇಂದಿಗೆ 5 ವರ್ಷಗಳ ಹಿಂದೆ ನಾನು ನಮ್ಮ ಮನೆಯಲ್ಲಿದ್ದ ನನ್ನ ಹೆಂಡತಿ, ನನ್ನ ಹಾಗೂ ಮಕ್ಕಳ ಚಿನ್ನದ ಆಭರಣವನ್ನು ಬೆಂಗಳೂರಿನ ಕಾವೇರಿ ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನಲ್ಲಿ ಅಡ ಇಟ್ಟಿದ್ದೆನು. 2019 ನೇ ಇಸವಿಯಲ್ಲಿ 9 ಗ್ರಾಂ ಚಿನ್ನಕ್ಕೆ ಅಂದಾಜು ರೂ.35,000/- ರಿಂದ 40,000/- ಬೆಲೆ ಇತ್ತು.

ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದು ಪೊಲೀಸರು. ಪೊಲೀಸರು ನ್ಯಾಯಾಲಯದ ಒಳಗಡೆ ಇರಲಿಲ್ಲ ಅವರು ಹೊರಗಡೆ ಇದ್ದರು. ಪೊಲೀಸರು ಏನನ್ನು ಹೇಳಬೇಕು ಎನ್ನುವುದನ್ನು ಬರೆದುಕೊಟ್ಟಿದ್ದು ನಾನು ಅದರ ಪ್ರಕಾರವೇ ನ್ಯಾಯಾಲಯದಲ್ಲಿ ಹೇಳಿದ್ದೇನೆ. ಪೊಲೀಸರ ಬಗ್ಗೆ ನನಗೆ ಭಯ ಇತ್ತು ಅದಕ್ಕಾಗಿ ನ್ಯಾಯಾಲಯದಲ್ಲಿ ಅವರು ಹೇಳಿದ ರೀತಿಯಲ್ಲಿ ಹೇಳಿದ್ದೇನೆ. ಪೊಲೀಸರ ಬಗ್ಗೆ ಭಯ ಇದ್ದಿದ್ದರಿಂದಲೇ ನಾನು ಆಭರಣ ಬಿಡಿಸಿಕೊಳ್ಳಲು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿಲ್ಲ. ಆರೋಪಿ ಬೆಂಗಳೂರಿನಲ್ಲಿ ಡ್ರೈವಿಂಗ್ ಕೆಲಸ ಮಾಡುತ್ತಿದ್ದುದು ನನಗೆ ಗೊತ್ತು. ಮು.ಮಾ-1 ಮತ್ತು 2 ರ ರೀತಿಯ ಆಭರಣಗಳನ್ನು ಎಲ್ಲ ವಯಸ್ಸಿನ ಹೆಣ್ಣುಮಕ್ಕಳು ಹಾಕಿಕೊಳ್ಳುತ್ತಾರೆ.

ಜ್ಯುವೆಲರಿ ಅಂಗಡಿಯಲ್ಲಿ ಪೊಲೀಸರು ಸುಮಾರು ಅರ್ಧತಾಸಿನವರೆಗೆ ಇದ್ದರು. ಪೊಲೀಸರೇ ಜ್ಯುವೆಲರಿ ಅಂಗಡಿ ಮಾಲೀಕನಿಗೆ ಚಿನ್ನ ಕೊಡುವಂತೆ ಕೇಳಿರುತ್ತಾರೆ ಎಂದು ಹೇಳುವುದು ನಿಜ.

**<u>ಮರು ವಿಚಾರಣೆಃ</u>** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.**
**ಕುಂದಾಪುರ**